

**ನಾಮಿನಿ ಸೂಚಿಸಿಲ್ಲದೆ ಇದ್ದಲ್ಲಿ ತಕ್ಷಣ ನಾಮ ನಿರ್ದೇಶನ ಮಾಡಿ**

ತಂದೆ ವಿಧಿವಶರಾಗಿದ್ದನ್ನು ತಿಳಿಸಿ ಖಾತೆಯಲ್ಲಿದ್ದ ಹಣವನ್ನು ಪಡೆಯಲು ಅನುಸರಿಸಬೇಕಾದ ಕ್ರಮದ ಬಗ್ಗೆ ವಿಚಾರಿಸಿದೆ. ಪಾಸ್ ಪುಸ್ತಕವನ್ನು ಪಡೆದು ಕಂಪ್ಯೂಟರನಲ್ಲಿ ಪರೀಕ್ಷಿಸಿದ ಮ್ಯಾನೇಜರ್ – 'ಖಾತೆಗೆ ನಾಮನಿರ್ದೇಶನವೇ ಇಲ್ಲ. ಆದ್ದರಿಂದ ನಾನೊಂದು ಅರ್ಜಿಯನ್ನು ನೀಡುತ್ತೇನೆ. ಅದನ್ನು ತುಂಬಿಸಿ ಅದರಲ್ಲಿ ಕೇಳಿರುವ ದಾಖಲೆಗಳನ್ನು ಒದಗಿಸಿ. ಅದಕ್ಕೆ ನೀವು ಸ್ವಲ್ಪ ಓಡಾಡಬೇಕಾಗುತ್ತದೆ' ಎಂದು ಹೇಳಿ ಹದಿನಾರು ಪುಟಗಳ ಅರ್ಜಿಯನ್ನು ನನ್ನ ಕೈಯಲ್ಲಿಟ್ಟರು. ಅವರ ಮಾತುಗಳನ್ನು ಕೇಳಿ ನಾನು ಸುಸ್ತಾಗಿ ಹೋದೆ. ಅದನ್ನು ಕಂಡ ಬ್ಯಾಂಕ್ ಮ್ಯಾನೇಜರ್, 'ಅರ್ಜಿಯನ್ನು ಸಲ್ಲಿಸುವಲ್ಲಿ ನಾವೂ ನಿಮಗೆ ನೆರವು ನೀಡುತ್ತೇವೆ. ಮೊದಲು ಅರ್ಜಿಯನ್ನು ಝೆರಾಕ್ಸ್ ಮಾಡಿಸಿ ಅದನ್ನು ಭರ್ತಿ ಮಾಡಿ ತಂದು ತೋರಿಸಿ' ಎಂದು ಹೇಳಿದರು.

ಮನೆಗೆ ಬಂದು ವಿಷಯ ತಿಳಿಸಿದಾಗ ನನ್ನ ತಂದೆಯ ಅಗಲಿಕೆಯಿಂದ ಮೊದಲೇ ದುಃಖತಪ್ತರಾಗಿದ್ದ ನನ್ನ ತಾಯಿ 'ಹಾಗಾದರೆ ನನಗೆ ಹಣ ಸಿಗುವುದಿಲ್ಲವಾ?' ಎಂದು ಕೇಳಿ ಅಳತೊಡಗಿದರು. ಅವರಿಗೆ ಸಮಾಧಾನ ಹೇಳುವ ಹೊತ್ತಿಗೆ ಸಾಕಾಯಿತು.

ಒಂದು ದಿನವೆಲ್ಲಾ ಅರ್ಜಿಯನ್ನು ಓದಿಕೊಂಡು ಅವಶ್ಯವಿದ್ದ ದಾಖಲೆಗಳನ್ನು ಕಲೆಹಾಕತೊಡಗಿದೆ. ಅರ್ಜಿಯ ಅನುಸಾರ ದಾಖಲೆಯನ್ನು ನೀಡುವ ಸಲುವಾಗಿ ನನ್ನ ತಾಯಿಯನ್ನು ಮತ್ತೆ ನೋಟರಿಯವರ ಬಳಿ ಕರೆದುಕೊಂಡು ಹೋಗಬೇಕಾಯಿತು. ಸಂಗ್ರಹಿಸಿದ್ದ ದಾಖಲೆಗಳ ಜೊತೆ ಅರ್ಜಿಯನ್ನು ತೆಗೆದುಕೊಂಡು ಹೋದರೆ ಬ್ಯಾಂಕಿನ ಅಧಿಕಾರಿಗಳು ನೀವು ಸೂಕ್ತ ಅಧಿಕಾರಿಗಳಿಂದ ಪಡೆದ ವಂಶವೃಕ್ಷದ ಪ್ರತಿಯನ್ನು ನೀಡಬೇಕೆಂದು ಹೇಳಿದರು. ಸೂಕ್ತ ಅಧಿಕಾರಿ ಅಂದರೆ ಯಾರು ಎನ್ನುವುದಕ್ಕೆ ಬ್ಯಾಂಕ್ ಅಧಿಕಾರಿಗಳ ಬಳಿ ಉತ್ತರವಿರಲಿಲ್ಲ. ಈ ಬಗ್ಗೆ ನೋಟರಿಯವರನ್ನೇ ವಿಚಾರಿಸಿದಾಗ ಅವರು ಉಪ ತಹಸೀಲ್ದಾರ್‌ರಿಂದ ಪಡೆಯಬೇಕು, ಅನಂತರ ಅದರ ಪ್ರತಿಯನ್ನು ನಾನು ದೃಢೀಕರಿಸಿಕೊಡುತ್ತೇನೆ ಎಂದು ತಿಳಿಸಿದರು. ಉಪ ತಹಸೀಲ್ದಾರರ ಕಚೇರಿಯನ್ನು ಸಂಪರ್ಕಿಸಿದಾಗ ವಂಶವೃಕ್ಷವನ್ನು ಪಡೆಯಲು ನಿಗದಿತ ಅರ್ಜಿ ಇದ್ದು, ನಮ್ಮ ಕೇಸಿನಲ್ಲಿ ಅದಕ್ಕೆ ನಮ್ಮ ತಾಯಿಯೇ ಅರ್ಜಿಯನ್ನು ಸಲ್ಲಿಸಬೇಕೆಂದು ತಿಳಿಯಿತು. ಹೀಗಾಗಿ, ನಮ್ಮ ತಾಯಿಯನ್ನು ಎರಡು ಕಿಲೋಮೀಟರ್ ದೂರದಲ್ಲಿ ಮೂರನೇ ಅಂತಸ್ತಿನಲ್ಲಿದ್ದ ಉಪ ತಹಸೀಲ್ದಾರರ ಕಚೇರಿಗೆ ಕರೆದುಕೊಂಡು ಹೋಗಬೇಕಾಯಿತು.ವಂಶವೃಕ್ಷವು ಎಂಟು ದಿನಗಳಲ್ಲಿ ಸಿದ್ಧವಿರುತ್ತದೆ ಎಂದು ತಿಳಿಸಿದರು. ಎರಡು ಮೂರು ಬಾರಿ ಕಚೇರಿಗೆ ಅಲೆದ ಮೇಲೆ ಹದಿನೈದು ದಿನಗಳ ನಂತರ ದಾಖಲೆ ನಮ್ಮ ಕೈಸೇರಿತು.

ಎಲ್ಲಾ ಸಿದ್ಧವಾಯಿತು, ಇನ್ನು ಬ್ಯಾಂಕಿಗೆ ನಮ್ಮ ಅರ್ಜಿಯನ್ನು ಸಲ್ಲಿಸಬಹುದೆಂಬ ಭರವಸೆಯೊಂದಿಗೆ ಬ್ಯಾಂಕ್ ಮ್ಯಾನೇಜರರನ್ನು ಭೇಟಿಯಾದೆ.ಎಲ್ಲವನ್ನೂ ಪರಿಶೀಲಿಸಿದ ಅವರು ಪಾಸ್ ಪುಸ್ತಕವನ್ನು ನೋಡಿ, ಖಾತೆಯಲ್ಲಿ ಐದು ಲಕ್ಷಕ್ಕಿಂತ ಹೆಚ್ಚು ಹಣ ಇರುವುದರಿಂದ ಯಾರಾದರೂ ಜಾಮೀನು ನೀಡಬೇಕು. ಜಾಮೀನು ನೀಡುವವರು ಖಾತೆಯಲ್ಲಿರುವ ಹಣಕ್ಕಿಂತ ಹೆಚ್ಚಿನ ಮೌಲ್ಯವನ್ನುಳ್ಳವರು ಎನ್ನುವುದರ ಪುರಾವೆಯಾಗಿ ತಮ್ಮ ಬಳಿಯಿರುವ ಯಾವುದದರು ಆಸ್ತ ಪತ್ರದ ಕಾಪಿಯನ್ನು ಕೊಡಬೇಕೆಂದು ಹೇಳಿದರು. ಇದನ್ನು ಕೇಳಿ ನಾನು ಭೂಮಿಗಿಳಿದುಹೋದೆ.

'ನಿಮ್ಮ ಬ್ಯಾಂಕಿನಲ್ಲೇ ಇರುವ ನನ್ನ ಖಾತೆಯಲ್ಲಿ ಅಷ್ಟು ಹಣವಿದ್ದು ನಾನೇ ಷ್ಯೂರಿಟಿ ನೀಡಬಹುದೇ?' ಎಂದು ಕೇಳಿದ್ದಕ್ಕೆ, 'ನಿಮ್ಮ ತಂದೆಯ ಖಾತೆಯಲ್ಲಿರುವ ಹಣಕ್ಕೆ ನೀವೂ ಭಾಗಸ್ಥರಾದ್ದರಿಂದ ನೀವು ಕೊಡುವಂತಿಲ್ಲ. ನಿಮ್ಮ ಕುಟುಂಬದ ಪರಿಚಯವಿರುವ ಬೇರೆಯವರೇ ಕೊಡಬೇಕು' ಎಂದು ಹೇಳಿದರು. ವಿಷಯ ತಿಳಿದ ನಮ್ಮ ಹಿತೈಷಿಗಳೊಬ್ಬರು ಮುಂದೆ ಬಂದು ಅಗತ್ಯವಾದ ಕಾಗದ ಪತ್ರಗಳನ್ನು ನೀಡಿದರು. ಅಂತೂಇಂತು ಬ್ಯಾಂಕಿನ ಅಧಕಾರಿಗಳು ಕೇಳಿದ ಎಲ್ಲಾ ದಾಖಲೆಗಳ ಜೊತೆಗೆ ಅರ್ಜಿಯನ್ನು ಸಲ್ಲಿಸಿದ್ದಾಯಿತು. ಅರ್ಜಿಯನ್ನು ಸಿದ್ಧಪಡಿಸಲು ಸುಮಾರು ಮೂವತ್ತು ದಿನಗಳು ಬೇಕಾದವು.

ಅರ್ಜಿಯನ್ನು ಪಡೆದ ಮ್ಯಾನೇಜರ್, 'ಮುಖ್ಯ ಕಚೇರಿಯಿಂದ ನಿಮ್ಮ ಅರ್ಜಿಗೆ ಒಪ್ಪಿಗೆ ಸಿಕ್ಕ ಕೂಡಲೇ ನಾನೇ ನಿಮಗೆ ತಿಳಿಸುತ್ತೇನೆ' ಎಂದು ಹೇಳಿದರು. ಮೊದಲೇ ದುಃಖತಪ್ತರಾಗಿದ್ದ ನನ್ನ ತಾಯಿ ಬ್ಯಾಂಕಿನ ಈ ಪ್ರಕರಣದಿಂದಾಗಿ ಖಿನ್ನತೆಗೆ ಒಳಗಾಗತೊಡಗಿದರು. ಪ್ರತಿಯೊಂದು ಘಟ್ಟದಲ್ಲೂ ಅವರಿಗೆ ಸಮಾಧಾನ ಹೇಳಿ ಧೈರ್ಯ ನೀಡಬೇಕಾಗುತ್ತಿತ್ತು. ಒಂದು ವಾರವಾದರೂ ಬ್ಯಾಂಕ್ ಮ್ಯಾನೇಜರರಿಂದ ಕರೆ ಬಾರದೆ ಬ್ಯಾಂಕಿಗೆ ಖುದ್ದಾಗಿ ಹೋದಾಗ, 'ನಿಮ್ಮ ಅರ್ಜಿಯನ್ನು ಪರಿಷ್ಕರಿಸಬೇಕಾದ ವಿಭಾಗ ಬೇರೆ ಕಟ್ಟಡಕ್ಕೆ ಸ್ಥಳಾಂತರಗೊಂಡಿರುವುದರಿಂದ ಸ್ವಲ್ಪ ತಡವಾಗುತ್ತದೆ' ಎಂದು ತಿಳಿಸಿದರು. ಹಲವು ದಿನಗಳ ನಂತರ ನಾವು ನಿರೀಕ್ಷಿಸುತ್ತಿದ್ದ ದೂರವಾಣಿ ಕರೆ ಬಂದು ನಮ್ಮ ತಂದೆಯ ಖಾತೆಯಲ್ಲಿದ್ದ ಹಣ ಚೆಕ್ ರೂಪದಲ್ಲಿ ನಮ್ಮ ತಾಯಿಯ ಕೈಸೇರಿತು. ಇಷ್ಟಾಗುವ ಹೊತ್ತಿಗೆ ಎರಡು ತಿಂಗಳುಗಳೇ ಕಳೆದುಹೋಗಿದ್ದವು.

ನಾಮನಿರ್ದೇಶನವಿಲ್ಲ ಎನ್ನುವ ಒಂದು ಸಣ್ಣ ಲೋಪದಿಂದಾಗಿ ಅಗಾಧ ದೈಹಿಕ ಶ್ರಮ ಹಾಗೂ ಮಾನಸಿಕ ಒತ್ತಡವನ್ನು ಅನುಭವಿಸಬೇಕಾಯಿತು. ಬ್ಯಾಂಕ್‌ನ ಎಲ್ಲ ಗ್ರಾಹಕರು ತಮ್ಮ ಖಾತೆಗಳಿಗೆ ನಾಮ ನಿರ್ದೇಶನವನ್ನು ಮಾಡುವುದು ಅವಶ್ಯ. ಇದರಿಂದ ಅವರ ವಾರಸುದಾರರಿಗೆ ಅನಗತ್ಯ ಒತ್ತಡ ತಪ್ಪುವುದು.

ಪ್ರತಿಕ್ರಿಯಿಸಿ: feedback@sudha.co.in